# ನಿಮ್ಮೊಡನೆ

## ಸೈಬರ್ ವಂಚನೆ: ಬಳಕೆದಾರರಿಗಿರಲಿ ಎಚ್ಚರ ಕಾನೂನು ಬಲಪಡಿಸಬೇಕಿದೆ ಸರ್ಕಾರ

ಆನ್‌ಲೈನ್ ಟ್ರೇಡಿಂಗ್ ಹೆಸರಿನಲ್ಲಿ ಉದ್ಯಮಿಗಳ ಹೆಸರು ಹಾಗೂ ಧ್ವನಿಯ ಶೈಲಿಯನ್ನು ಅನುಕರಿಸುವ ಮೂಲಕ ಸೈಬರ್ ವಂಚಕರು 86 ಲಕ್ಷ ರೂಪಾಯಿಗಳನ್ನು ಲಪಟಾಯಿಸಿರುವ ಎರಡು ಪ್ರಕರಣಗಳು ಇತ್ತೀಚೆಗೆ ಬೆಂಗಳೂರಿನಿಂದ ವರದಿಯಾಗಿವೆ. ಆಧಾರ್ ಅಪ್‌ಡೇಟ್ ಮಾಡಬೇಕಾಗಿದೆಯೆಂದು ಬ್ಯಾಂಕ್ ಹೆಸರಿನಲ್ಲಿ ಲಿಂಕ್ ಕಳುಹಿಸಿ 18.5 ಲಕ್ಷ ರೂಪಾಯಿ ವಂಚಿಸಲಾಗಿದೆ. ಸೈಬರ್ ವಂಚನೆಯ ಇಂಥ ಪ್ರಕರಣಗಳು ದಿನ ನಿತ್ಯವೂ ನಡೆಯುತ್ತಿವೆ. ಅಮಾಯಕರು ಮಾತ್ರವಲ್ಲದೆ, ಆನ್‌ಲೈನ್ ವಹಿವಾಟಿನ ಆಳ ಅಗಲ ಬಲ್ಲವರೂ ಬೇಸ್ತುಬೀಳುತ್ತಿದ್ದಾರೆ.

ವಂಚನೆಯ ಹೊಸ ಹೊಸ ದಾರಿಗಳನ್ನು ಸೈಬರ್ ಕಳ್ಳರು ಕಂಡುಕೊಳ್ಳುತ್ತಿದ್ದಾರೆ. ಪೊಲೀಸ್, ಸಿಬಿಐ, ಜಾರಿ ನಿರ್ದೇಶನಾಲಯಗಳ ಹೆಸರಿನಲ್ಲಿ ಬೆದರಿಕೆಯೊಡ್ಡಿ ವಂಚಿಸಲಾಗುತ್ತದೆ. ವಿಡಿಯೊ ಕರೆಯ ಮೂಲಕ ಗಂಟೆಗಂಟ್ಟಲೆ ಗೃಹಬಂಧನದಲ್ಲಿರಿಸಿ, ಕುಳಿತಲ್ಲಿಂದಲೇ ಲಕ್ಷಾಂತರ ರೂಪಾಯಿ ಲಪಟಾಯಿಸಿರುವ ಪ್ರಸಂಗಗಳು ಹೆಚ್ಚುತ್ತಿವೆ. ಸೈಬರ್ ವಂಚನೆಗಳ ಕುರಿತು ಎಚ್ಚರಿಕೆ ವಹಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರೇ ಕರೆ ನೀಡಿದ್ದಾರೆ. ಮಹಿಳೆಯರನ್ನು ದಾಳವಾಗಿಸಿಕೊಂಡು ವಿಡಿಯೊ ಕರೆಗಳ ಮೂಲಕ ಬ್ಲ್ಯಾಕ್‌ಮೇಲ್ ಮಾಡುವ ಖದೀಮರೂ ಇದ್ದಾರೆ. ಚಾರಿತ್ರ್ಯಕ್ಕೆ ಮಸಿ ಬಳಿಯುವ ಬೆದರಿಕೆಗಳನ್ನು ನಿಭಾಯಿಸಲಾಗದೆ ಹಣದ ಜೊತೆಗೆ ಜೀವ ಕಳೆದುಕೊಂಡವರೂ ಇದ್ದಾರೆ. ಸೈಬರ್ ವಂಚನೆಗೊಳಗಾಗಿ ಹಣ ಮತ್ತು ನೆಮ್ಮದಿ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಪ್ರಕರಣಗಳು ಕೌಟುಂಬಿಕ ಸಂಬಂಧಗಳ ಮೇಲೂ ಪರಿಣಾಮ ಬೀರಿರುವುದಿದೆ.

ಜಾಗೃತಿ ಕಾರ್ಯಕ್ರಮಗಳು ಹಾಗೂ ಕಾನೂನು ಕಣ್ಗಾವಲಿನ ನಡುವೆಯೂ ಸೈಬರ್ ವಂಚನೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ಗಾಳ ಹಾಕುವವರೂ ಇದ್ದಾರೆ. 2019ರಲ್ಲಿ 26891 ಸೈಬರ್ ವಂಚನೆ ಪ್ರಕರಣಗಳು ದೇಶದ ವಿವಿಧ ಭಾಗಗಳಿಂದ ವರದಿಯಾಗಿದ್ದವು. 2022ರ ವೇಳೆಗೆ ಈ ಪ್ರಮಾಣ 42,710ಕ್ಕೆ ತಲುಪಿದ್ದವು. ದಾಖಲಾದ ಪ್ರಕರಣಗಳ ಜೊತೆಗೆ ದಾಖಲಾಗದ ಪ್ರಕರಣಗಳನ್ನೂ ಊಹಿಸಿಕೊಂಡರೆ ಸೈಬರ್ ವಂಚನೆಯ ವಿರಾಟ್ ಜಾಲ ದಿಗಿಲು ಉಂಟುಮಾಡುವಂತಿದೆ. ನಾಗರಿಕರು ಯಾವೆಲ್ಲ ರೂಪದಲ್ಲಿ ಸೈಬರ್ ವಂಚನೆಗೊಳಗಾಗಬಹುದು ಎನ್ನುವುದರ ಪಟ್ಟಿಯನ್ನು ಸರ್ಕಾರ ಪ್ರಕಟಿಸಿದೆ.

ಮೊಬೈಲ್‌ಗಳಿಗೆ ನಮ್ಮನ್ನು ಒಪ್ಪಿಸಿಕೊಂಡಿರುವ ಸಂದರ್ಭದಲ್ಲಿ ಖಾಸಗೀತನ ಎನ್ನುವುದೇ ಸುಳ್ಳು ಎನ್ನುವ ಸಂದರ್ಭ ಇಂದಿನದಾಗಿದೆ. ವಿಶ್ವದ ಯಾವುದೋ ಭಾಗದಲ್ಲಿ ನಿಗೂಢ ಕಣ್ಣುಗಳು ನಮ್ಮ ಚಟುವಟಿಕೆಗಳನ್ನು ಗಮನಿಸುತ್ತಿರುತ್ತವೆ; ಕಾಣದ ಕೈಗಳು ದೂರದಿಂದಲೇ ನಮ್ಮ ಬ್ಯಾಂಕ್ ಖಾತೆಯ ಕೀಲಿಕೈ ಹುಡುಕಾಟದಲ್ಲಿರುತ್ತವೆ. ಡಿಜಿಟಲ್ ರೂಪದಲ್ಲಿ ಹಣದ ವಹಿವಾಟಿನ ಪ್ರಮಾಣ ಹೆಚ್ಚುತ್ತಿರುವುದು ಕೂಡ ವಂಚನೆ ವ್ಯಾಪಕವಾಗಲು ಕಾರಣವಾಗಿದೆ.

ಜಾಣರೆನಿಸಿಕೊಂಡವರು ಕೂಡ ಒಂದಲ್ಲಾ ಒಂದು ಸಂದರ್ಭದಲ್ಲಿ ವಂಚನೆಯ ಕಬಂಧ ಬಾಹುಗಳ ಹಿಡಿತಕ್ಕೆ ಸಿಲುಕುವಷ್ಟು ಹತ್ತಿರ ಹೋಗಿ ಪಾರಾಗಿಬಂದಿರುತ್ತಾರೆ. ಸುಶಿಕ್ಷಿತರೂ ದೊಡ್ಡ ಪ್ರಮಾಣದಲ್ಲಿ ಸೈಬರ್ ವಂಚನೆಗೆ ಒಳಗಾಗುತ್ತಿದ್ದಾರೆ. ಇದಕ್ಕೆ ಸೈಬರ್ ವಂಚಕರ ಚಾಣಾಕ್ಷತೆ ಕಾರಣವಾಗಿರುವಂತೆ – ನಮ್ಮ ಅತ್ಯಾಸೆಯೂ, ಅವಕಾಶ ಸಿಕ್ಕಾಗ ಜಾಗೃತಗೊಳ್ಳುವ ಕಾಮನೆಗಳೂ ಕಾರಣವಾಗಿವೆ. ನಾವು ನೈತಿಕವಾಗಿ ಸಡಿಲವಾದಷ್ಟೂ ನಮ್ಮನ್ನು ವಂಚಿಸಲು ಯತ್ನಿಸುವವರು ಪ್ರಬಲರಾಗುತ್ತಾ ಹೋಗುತ್ತಾರೆ. ಆತ್ಮಸಾಕ್ಷಿಯೊಂದಿಗೆ, ಮೌಲ್ಯಗಳೊಂದಿಗೆ ರಾಜಿಗೊಳಗಾದವರು ಕಾನೂನು ಸಂಸ್ಥೆಗಳ ಹೆಸರಿನಲ್ಲಿ ವಂಚಕರು ಸಂಪರ್ಕಿಸಿದಾಗ ಅಳುಕಿನಿಂದ ಅವರನ್ನು ಎದುರಿಸಲಾಗದೆ ದುರ್ಬಲ ಕ್ಷಣಗಳನ್ನು ತಾವೇ ಸೃಷ್ಟಿಸಿಕೊಂಡು ಬಿಡುತ್ತಾರೆ.

ಸೈಬರ್ ವಂಚಕರನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ಜನಜಾಗೃತಿಯ ಆಂದೋಲನ ವ್ಯಾಪಕವಾಗಿ ನಡೆಯಬೇಕಾಗಿದೆ. ಶಾಲಾ ಕಾಲೇಜುಗಳಲ್ಲಿ ಸೈಬರ್ ಸುರಕ್ಷತೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಸೈಬರ್ ವಂಚನೆ ಪ್ರಕರಣಗಳ ನಿರ್ವಹಣೆಗಾಗಿ ಇರುವ ಪೊಲೀಸ್ ವಿಭಾಗವನ್ನು ಇನ್ನಷ್ಟು ಸಮರ್ಥಗೊಳಿಸಬೇಕಾಗಿದೆ. ಆಧಾರ್ ಹೆಸರಿನಲ್ಲಿ ನಾಗರಿಕರೆಲ್ಲರ ಅಸ್ತಿತ್ವವನ್ನು ಆನ್‌ಲೈನ್‌ಗುಣಿಸಿರುವ ಹಾಗೂ ಡಿಜಿಟಲ್ ವಹಿವಾಟನ್ನು ಉತ್ತೇಜಿಸುತ್ತಿರುವ ಸರ್ಕಾರ, ಸೈಬರ್ ಸುರಕ್ಷತೆ ಖಾತರಿಗೊಳಿಸುವ ಹೊಣೆಗಾರಿಕೆಯನ್ನೂ ಹೊರಬೇಕು. ಜನಜಾಗೃತಿಗಷ್ಟೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಸೈಬರ್ ಕಾನೂನುಗಳನ್ನು ಬಲಗೊಳಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಸಾಧ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕಾಗಿದೆ. 'ಡಿಜಿಟಲ್ ಭಾರತ' ಎನ್ನುವ ಆಕರ್ಷಕ ಹೆಸರು ಸುರಕ್ಷಿತವೂ ಆಗಿರುವಂತೆ ನೋಡಿಕೊಳ್ಳುವ ಸಾಮೂಹಿಕ ಹೊಣೆಗಾರಿಕೆಯನ್ನು ಸರ್ಕಾರ ಹಾಗೂ ಸಮಾಜ ನಿರ್ವಹಿಸಬೇಕಾಗಿದೆ. ಆನ್‌ಲೈನ್ ಜಗತ್ತಿನಲ್ಲಿ ಹಿಂದಿರುಗಿ ಬಾರದಷ್ಟು ದೂರ ನಾವು ಪಯಣಿಸಿ ಆಗಿದೆ. ನಮ್ಮ ಪಾಲಿಗೆ ಉಳಿದಿರುವುದು, ನಮ್ಮ ಮುಂದಿನ ಪಯಣವನ್ನು ಆದಷ್ಟು ಸುಗಮವೂ ಸರಳವೂ ಆಗಿಸಿಕೊಳ್ಳುವುದು.

■ ರಘುನಾಥ ಚ.ಹ.

**ಸರ್ಕಾರದ ಜಾಗೃತಿ ಕಾರ್ಯಕ್ರಮಗಳು ಹಾಗೂ ಕಾನೂನು ಕಣ್ಗಾವಲಿನ ನಡುವೆಯೂ ಸೈಬರ್ ವಂಚನೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ಗಾಳ ಹಾಕುವ ವಂಚಕರು ಹೆಚ್ಚುತ್ತಿದ್ದಾರೆ.**



ಈಶ್ವರ್